# ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಬಂಟ್ವಾಳ. ದ. ಕ.

**ಉಪಸ್ಥಿತರು:**

**ಶ್ರೀ.ರಾಜೇಂದ್ರ ಪ್ರಸಾದ್ .ಕೆ.ಎಸ್ .** ಎಲ್ ಎಲ್. ಎಂ.

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.ಬಂಟ್ವಾಳ.**

ದಿನಾಂಕ: **24** ನೇ ಜುಲೈ **2025.**

ಅಪರಾಧಿಕ ಮೊಕದ್ದಮೆ **(Criminal Calender Case)**ಸಂಖ್ಯೆ:**752/2023**

**ಫಿರ್ಯಾದುದಾರರು:** **ಕರ್ನಾಟಕ ಸರ್ಕಾರದ ಪರವಾಗಿ**
ಬಂಟ್ವಾಳ ಸಂಚಾರ ಪೋಲೀಸ್ ಠಾಣೆ

**(ಪ್ರತಿನಿಧಿಸುವವರು ಸಹಾಯಕ ಸರ್ಕಾರಿ ಅಭಿಯೋಜಕರು)**

// **ವಿರುದ್ಧ** //

**ಆರೋಪಿ:** **ಪ್ರೀತಿ ಕೆ.**
ತಂದೆ: ಚಿದಾನಂದ ಜಿ ಶಾಸ್ತ್ರಿ,
ವಯಸ್ಸು 28 ವರ್ಷಗಳು,
ವಾಸ : ಕಡೆಮಜಲು ಮನೆ,
ಬಂದರು ಗ್ರಾಮ,
ಬೆಳ್ತಂಗಡಿ ತಾಲೂಕು.

**(ಪ್ರತಿನಿಧಿಸುವವರು ಶ್ರೀ.ಪಿ.ಜಯರಾಮ ರೈ, ವಕೀಲರು)**

**=♦=**

| | | |
|---|---|---|
| 1. ಆರೋಪ ಪ್ರಾರಂಭಿಕ ದಿನಾಂಕ | : | 16.05.2023 |
| 2. ಆರೋಪ ವರದಿ ಮಾಡಿದ ದಿನಾಂಕ | : | 16.05.2023 |
| 3. ಆರೋಪಿಯು ಜಾಮೀನು ಪಡೆದ ದಿನಾಂಕ | : | 24.11.2023 |
| 4. ಫಿರ್ಯಾದುದಾರರ ಹೆಸರು | : | ಶ್ರೀ.ಉಮೇಶ್ |
| 5. ಸಾಕ್ಷ್ಯ ವಿಚಾರಣಾ ಪ್ರಾರಂಭ ದಿನಾಂಕ | : | 02.07.2025 |
| 6. ವಿಚಾರಣೆ ಮುಕ್ತಾಯ ದಿನಾಂಕ | : | 18.07.2025 |

7. ಆರೋಪಗಳ ಸ್ವರೂಪ : ಭಾರತೀಯ ದಂಡ ಸಂಹಿತೆ ಕಲಂ-279 ಮತ್ತು 304(ಎ).

8. ನ್ಯಾಯಾಧೀಶರ ತೀರ್ಮಾನ : **ಆರೋಪಿಯನ್ನು ನಿರ್ದೋಷಿಯೆಂದು ತೀರ್ಮಾನಿಸಲಾಗಿದೆ.**

( ರಾಜೇಂದ್ರ ಪ್ರಸಾದ್ ಕೆ.ಎಸ್.)
ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಬಂಟ್ವಾಳ.

# ತೀರ್ಪು

ಬಂಟ್ವಾಳ ಸಂಚಾರ ಪೊಲೀಸ್ ಠಾಣಾಧಿಕಾರಿಗಳು ಆರೋಪಿಯ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ-279, 304(ಎ) ರ ಶಿಕ್ಷಾರ್ಹ ಅಪರಾಧಗಳಿಗಾಗಿ ದೋಷಾರೋಪಣಾ ಪಟ್ಟಿ ಸಲ್ಲಿಸಿರುತ್ತಾರೆ.

2. **ಅಭಿಯೋಜನೆಯ ಪ್ರಕರಣದ ಸಂಕ್ಷಿಪ್ತ ಸಾರಾಂಶವೇನೆಂದರೆಃ**

ದಿನಾಂಕಃ16.05.2023 ರಂದು ಬೆಳಿಗ್ಗೆ 07.50 ಗಂಟೆ ಸಮಯದಲ್ಲಿ, ಬಂಟ್ವಾಳ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿರುವ ಬಂಟ್ವಾಳ ತಾಲೂಕು, ಕಾವಳಪಡೂರು ಗ್ರಾಮದ ಕಾರಿಂಜ ಕ್ರಾಸ್ ಎಂಬಲ್ಲಿ, ಆರೋಪಿಯು ತನ್ನ ಬಾಬ್ತು ಕೆಎ-70-ಎಂ-4189 ನೇ ಕಾರನ್ನು ಕಡೂರು-ಬಂಟ್ವಾಳ ರಾಷ್ಟ್ರೀಯ ಹೆದ್ದಾರಿಯಲ್ಲಿ, ಬೆಳ್ತಂಗಡಿ ಕಡೆಯಿಂದ ಬಿ. ಸಿ ರೋಡು ಕಡೆಗೆ ಅಜಾಗರೂಕತೆ ಹಾಗೂ ದುಡುಕುತನದಿಂದ ಚಲಾಯಿಸಿಕೊಂಡು ಬಂದು ರಸ್ತೆಯ ಬದಿಯಲ್ಲಿ ನಡೆದುಕೊಂಡು ಬರುತ್ತಿದ್ದ ಪಾದಚಾರಿ ಸೇಸಮ್ಮ ಎಂಬುವವರ ಹಿಂಭಾಗಕ್ಕೆ ಡಿಕ್ಕಿ ಹೊಡೆದ ಪರಿಣಾಮ, ಅವರ ಹಿಂಬದಿ ತಲೆಗೆ ಜಜ್ಜಿದ ರಕ್ತ ಗಾಯ, ನೆತ್ತಿಯ ಮೇಲೆ ಜಜ್ಜಿದ ರಕ್ತ ಗಾಯ, ಎಡ ಕೋಲು ಕೈಯಲ್ಲಿ ಸೀಳಿದ ರಕ್ತ ಗಾಯ, ಬಲ ಮತ್ತು ಎಡ ಕೋಲು ಕೈಯಲ್ಲಿ ಸೀಳಿದ ರಕ್ತಗಾಯ ಹಾಗೂ ಎರಡು ಕಾಲು ಮೊಣಗಂಟಿನಲ್ಲಿ ತರಚಿದ ಗಾಯಗಳಾಗಿದ್ದು, ಅವರನ್ನು ಬಂಟ್ವಾಳ ಸಾರ್ವಜನಿಕ ತಾಲೂಕು ಆಸ್ಪತ್ರೆಗೆ ಕರೆತಂದಾಗ ಅಲ್ಲಿನ

ವೈದ್ಯರು ಪರೀಕ್ಷಿಸಿ ಸಾಗಿಸುವಾಗಲೇ ಮೃತಪಟ್ಟಿರುವುದಾಗಿ ತಿಳಿಸಿದ್ದು, ಸೇಸಮ್ಮರವರು ಮೃತಪಡಲು ಆರೋಪಿಯು ಕಾರಣಕರ್ತನಾಗಿರುತ್ತಾನೆ ಎಂದು ಆಪಾದಿಸಲಾಗಿದೆ. ನಂತರ ಬಂಟ್ವಾಳ ಸಂಚಾರ ಪೊಲೀಸ್ ಠಾಣಾಧಿಕಾರಿಗಳು ತನಿಖೆ ನಡೆಸಿ ಆರೋಪಿಯ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ-279, 304(ಎ) ರ ದಂಡನೀಯವಾದ ಆಪರಾಧಗಳಿಗಾಗಿ ದೋಷಾರೋಪಣಾ ಪಟ್ಟಿ ಸಲ್ಲಿಸಿರುತ್ತಾರೆ.

3. ತನಿಖಾಧಿಕಾರಿಗಳು ದೋಷಾರೋಪಣಾ ಪಟ್ಟಿ ಸಲ್ಲಿಸಿದ ನಂತರ, ಆರೋಪಿಯ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ-279, 304(ಎ) ರ ಶಿಕ್ಷಾರ್ಹ ಅಪರಾಧಗಳಿಗೆ ಸಂಬಂಧಿಸಿದಂತೆ ಅಪರಾಧಿಕ ಪ್ರಕ್ರಿಯಾ ಸಂಹಿತೆ ಕಲಂ 190(1)(ಬಿ) ರಡಿಯಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸಿ ಸಂಜ್ಞೆ ತೆಗೆದುಕೊಳ್ಳಲಾಯಿತು.

4. ಈ ನ್ಯಾಯಾಲಯದಿಂದ ಸಮನ್ಸ್ ಜಾರಿಯಾದ ನಂತರ ಆರೋಪಿಯ ತನ್ನ ವಕೀಲರ ಮೂಲಕ ಹಾಜರಾಗಿದ್ದು, ಜಾಮೀನಿನ ಮೇಲಿರುತ್ತಾರೆ. ಈ ನ್ಯಾಯಾಲಯವು ಅಪರಾಧಿಕ ಪ್ರಕ್ರಿಯಾ ಸಂಹಿತೆ ಕಲಂ 207 ರಂತೆ ಆರೋಪಿಗೆ ದೋಷಾರೋಪಣಾ ಪತ್ರ ಹಾಗೂ ಅದರ ಸಹ ಪ್ರತಿಗಳ ನಕಲುಗಳನ್ನು ನೀಡಿ ಅವರ ವಿರುದ್ದದ ಅಪರಾಧಕ್ಕಾಗಿ ಆಪಾದನೆಯನ್ನು ರಚಿಸಿ, ಆರೋಪಿಗೆ ಓದಿ ಹೇಳಲಾಗಿ ತಾವು ಯಾವುದೇ ತಪ್ಪು ಮಾಡಿಲ್ಲವೆಂದು ಹೇಳಿದ್ದು ಹಾಗೂ ಈ ಪ್ರಕರಣದ ವಿಚಾರಣೆಯನ್ನು ನಡೆಸಬೇಕೆಂದು ಕೇಳಿಕೊಂಡ ಮೇರೆಗೆ ಪ್ರಕರಣವನ್ನು ಸಾಕ್ಷಿದಾರರ ವಿಚಾರಣೆಗಾಗಿ ನಿಗಧಿಪಡಿಸಿ ಸಾಕ್ಷಿದಾರರಿಗೆ ಸಾಕ್ಷ್ಯವನ್ನು ನುಡಿಯಲು ನ್ಯಾಯಾಲಯದಿಂದ ಸಮನ್ಸ್ ಕಳುಹಿಸಲಾಯಿತು.

5. ಅಭಿಯೋಜನೆಯವರು ತಮ್ಮ ಪ್ರಕರಣವನ್ನು ಸಾಭೀತು ಪಡಿಸಲು ಪ್ರಾಸಾ-1 ರಿಂದ ಪ್ರಾಸಾ-4 ರವರನ್ನು ವಿಚಾರಣೆ ಮಾಡಿ, ನಿಶಾನೆ.ಪಿ-1 ರಿಂದ ನಿಶಾನೆ.ಪಿ-8 ರಂತೆ ದಾಖಲೆಗಳನ್ನು ಹಾಜರುಪಡಿಸಿರುತ್ತಾರೆ. ಪ್ರಸ್ತುತ ಪ್ರಕರಣದಲ್ಲಿ ಪ್ರಾಸಾ-1 ಮತ್ತು ಪ್ರಾಸಾ-2 ರವರು ಪ್ರಮುಖ ಹಾಗೂ ಪ್ರತ್ಯಕ್ಷ ಸಾಕ್ಷಿದಾರರು ಹಾಗೂ

ಪ್ರಾಸಾ-3 ಮತ್ತು ಪ್ರಾಸಾ-4 ರವರು ಮಹಜರ್ ಸಾಕ್ಷಿದಾರರಾಗಿದ್ದು, ಅಭಿಯೋಜನೆಯ ಪ್ರಕರಣಕ್ಕೆ ಪ್ರತಿಕೂಲ ಸಾಕ್ಷ್ಯ ನುಡಿದಿರುವುದರಿಂದ ಅಭಿಯೋಜನೆಯವರು ಉಳಿದ ಸಾಕ್ಷಿದಾರರಾದ ಚಾಸಾ-2 ರಿಂದ 6 ಹಾಗೂ ಚಾಸಾ-10 ರಿಂದ ಚಾಸಾ-16 ರವರ ಸಾಕ್ಷ್ಯ ವಿಚಾರಣೆಯನ್ನು ಮಾಡಿದರೂ ಸಹ ಅವರ ಸಾಕ್ಷ್ಯದ ಆಧಾರದ ಮೇಲೆ ಆರೋಪಿಯ ಅಪರಾಧವನ್ನು ಸಾಭೀತುಪಡಿಸಲು ಸಾಧ್ಯವಾಗುವುದಿಲ್ಲ. ಆದ್ದರಿಂದ ಪ್ರಾಸಾ-1 ರಿಂದ ಪ್ರಾಸಾ-4 ರವರೇ ಪ್ರತಿಕೂಲ ಸಾಕ್ಷ್ಯ ನುಡಿದಿರುವುದರಿಂದ ಪ್ರಕರಣವನ್ನು ಮುಂದುವರಿಸುವ ಅವಶ್ಯಕತೆ ಕಂಡು ಬರದಿದ್ದ ಕಾರಣ, ಮಾನ್ಯ ಅಭಿಯೋಜಕರ ಕೋರಿಕೆಯನ್ನು ತಳ್ಳಿ ಹಾಕಿ ಬಾಕಿ ಉಳಿದ ಸಾಕ್ಷಿದಾರರ ಸಾಕ್ಷ್ಯ ವಿಚಾರಣೆಯನ್ನು ಕೈ ಬಿಡಲಾಗಿರುತ್ತದೆ. ಆರೋಪಿಯ ವಿರುದ್ಧ ಆರೋಪವನ್ನು ಸೂಚಿಸುವಂತಹ ಯಾವುದೇ ಸಾಕ್ಷ್ಯ (Incriminating Evidence) ಸಾಕ್ಷಿಗಳ ಹೇಳಿಕೆಯಲ್ಲಿ ಇಲ್ಲದಿರುವ ಕಾರಣ ಅಪರಾಧಿಕ ಪ್ರಕ್ರಿಯಾ ಸಂಹಿತೆ ಕಲಂ-313 ರಡಿಯಲ್ಲಿ ಆರೋಪಿಯ ಹೇಳಿಕೆಯನ್ನು ಮನ್ನಾ ಮಾಡಲಾಯಿತು.

7. ಉಭಯ ಪಕ್ಷಗಾರರ ವಾದವನ್ನು ಕೇಳಲಾಯಿತು.

8. ವಾದ ವಿವಾದಗಳನ್ನು ಕೇಳಿ, ದಾಖಲೆಗಳನ್ನು ಪರಿಶೀಲಿಸಿದಾಗ ನ್ಯಾಯಾಲಯದ ಅವಗಾಹನೆಗೆ ಬರುವ ಅಂಶಗಳು ಈ ಕೆಳಕಂಡಂತೆ ಇರುತ್ತವೆ.

## ಅಂಶಗಳು

1. ದಿನಾಂಕಃ16.05.2023 ರಂದು ಬೆಳಿಗ್ಗೆ 07.50ಗಂಟೆ ಸಮಯದಲ್ಲಿ, ಬಂಟ್ವಾಳ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿರುವ ಬಂಟ್ವಾಳ ತಾಲೂಕು, ಕಾವಳಪಡೂರು ಗ್ರಾಮದ ಕಾರಿಂಜ ಕ್ರಾಸ್ ಎಂಬಲ್ಲಿ, ಆರೋಪಿಯು ತನ್ನ ಬಾಬ್ತು ಕಾರ್ ಸಂಖ್ಯೆಃ ಕೆಎ-70-ಎಂ-4189ನ್ನು ಕಡೂರು-ಬಂಟ್ವಾಳ ರಾಷ್ಟ್ರೀಯ ಹೆದ್ದಾರಿಯಲ್ಲಿ, ಬೆಳ್ತಂಗಡಿ ಕಡೆಯಿಂದ ಬಿ. ಸಿ ರೋಡು ಕಡೆಗೆ ಅಜಾಗರೂಕತೆ ಹಾಗೂ ದುಡುಕುತನದಿಂದ ಚಲಾಯಿಸಿಕೊಂಡು ಬಂದು ರಸ್ತೆಯ ಬದಿಯಲ್ಲಿ

ನಡೆದುಕೊಂಡು ಬರುತ್ತಿದ್ದ ಪಾದಚಾರಿ ಸೇಸಮ್ಮ ಎಂಬುವವರ ಹಿಂಭಾಗಕ್ಕೆ ಡಿಕ್ಕಿ ಹೊಡೆದಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ-279 ರಡಿಯಲ್ಲಿ ದಂಡನೀಯವಾದ ಅಪರಾಧವೆಸಗಿದ್ದಾರೆಂದು ಅಭಿಯೋಜನೆಯವರು ಸಂಶಯಾತೀತವಾಗಿ ರುಜುವಾತುಪಡಿಸುತ್ತಾರೆಯೆ ?.

2. ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಆರೋಪಿಯು ತನ್ನ ಬಾಬ್ತು ಕೆಎ-70-ಎಂ-4189ನೇ ಕಾರನ್ನು ದುಡುಕುತನ ಮತ್ತು ನಿರ್ಲಕ್ಷ್ಯತನದಿಂದ ಚಲಾಯಿಸಿಕೊಂಡು ಬಂದು, ಸದರಿ ರಸ್ತೆಯ ಬದಿಯಲ್ಲಿ ನಡೆದುಕೊಂಡು ಬರುತ್ತಿದ್ದ ಪಾದಚಾರಿ ಸೇಸಮ್ಮ ಎಂಬುವವರ ಹಿಂಭಾಗಕ್ಕೆ ಡಿಕ್ಕಿ ಹೊಡೆದ ಪರಿಣಾಮ, ಅವರ ಹಿಂಬದಿ ತಲೆಗೆ ಜಜ್ಜಿದ ರಕ್ತ ಗಾಯ, ನೆತ್ತಿಯ ಮೇಲೆ ಜಜ್ಜಿದ ರಕ್ತ ಗಾಯ, ಎಡ ಕೋಲು ಕೈಯಲ್ಲಿ ಸೀಳಿದ ರಕ್ತ ಗಾಯ, ಬಲ ಮತ್ತು ಎಡ ಕೋಲು ಕೈಯಲ್ಲಿ ಸೀಳಿದ ರಕ್ತಗಾಯ ಹಾಗೂ ಎರಡು ಕಾಲು ಮೊಣಗಂಟಿನಲ್ಲಿ ತರಚಿದ ಗಾಯಗಳಾಗಿದ್ದು, ಅವರನ್ನು ಬಂಟ್ವಾಳ ಸಾರ್ವಜನಿಕ ತಾಲೂಕು ಆಸ್ಪತ್ರೆಗೆ ಕರೆತಂದಾಗ ಅಲ್ಲಿನ ವೈದ್ಯರು ಪರೀಕ್ಷಿಸಿ ಸಾಗಿಸುವಾಗಲೇ ಮೃತಪಟ್ಟಿರುವುದಾಗಿ ತಿಳಿಸಿದ್ದು, ಸೇಸಮ್ಮ ರವರು ಮೃತಪಡಲು ಆರೋಪಿಯು ಕಾರಣಕರ್ತನಾಗಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ-304(ಎ) ರಡಿಯಲ್ಲಿ ದಂಡನೀಯವಾದ ಅಪರಾಧವೆಸಗಿದ್ದಾರೆಂದು ಅಭಿಯೋಜನೆಯವರು ಸಂಶಯಾತೀತವಾಗಿ ರುಜುವಾತುಪಡಿಸುತ್ತಾರೆಯೆ ?

3. ಯಾವ ಆಜ್ಞೆ ಅಥವಾ ಶಿಕ್ಷೆ ?.

9. ಮೇಲ್ಕಂಡ ಅಂಶಗಳಿಗೆ ನನ್ನ ಉತ್ತರ ಈ ಕೆಳಕಂಡಂತೆ ಇರುತ್ತದೆ:

ಅಂಶ: 1 - ನಕಾರಾತ್ಮಕವಾಗಿ

ಅಂಶ: 2 - ನಕಾರಾತ್ಮಕವಾಗಿ

ಅಂಶ: 3 - ಅಂತಿಮ ಆದೇಶದ ಪ್ರಕಾರ.

## -ಕಾರಣಗಳು -

10. <u>ಅಂಶ.1 ಮತ್ತು 2 :</u> ಈ ಎರಡು ಅಂಶಗಳು ಒಂದಕ್ಕೊಂದು ಪೂರಕವಾಗಿರುವುದರಿಂದ ಹಾಗೂ ಪ್ರಕರಣದ ವಸ್ತುಸಂಗತಿಯು ಪುನರಾವರ್ತನೆಯಾಗುವುದನ್ನು ತಪ್ಪಿಸುವ ಸಲುವಾಗಿ ಈ ಎರಡು ಅಂಶಗಳನ್ನು ಒಟ್ಟಾಗಿ ಚರ್ಚಿಸಲಾಗಿದೆ.

11. ಈ ಪ್ರಕರಣದಲ್ಲಿ ಆರೋಪಿಸಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಆರೋಪಿಯು ತನ್ನ ಬಾಬ್ತು ಕೆಎ-70-ಎಂ-4189 ನೇ ಕಾರನ್ನು ಕಡೂರು-ಬಂಟ್ವಾಳ ರಾಷ್ಟ್ರೀಯ ಹೆದ್ದಾರಿಯಲ್ಲಿ, ಬೆಳ್ತಂಗಡಿ ಕಡೆಯಿಂದ ಬಿ. ಸಿ ರೋಡು ಕಡೆಗೆ ಅಜಾಗರೂಕತೆ ಹಾಗೂ ದುಡುಕುತನದಿಂದ ಚಲಾಯಿಸಿಕೊಂಡು ಬಂದು ರಸ್ತೆಯ ಬದಿಯಲ್ಲಿ ನಡೆದುಕೊಂಡು ಬರುತ್ತಿದ್ದ ಪಾದಚಾರಿ ಸೇಸಮ್ಮ ಎಂಬುವವರ ಹಿಂಭಾಗಕ್ಕೆ ಡಿಕ್ಕಿ ಹೊಡೆದ ಪರಿಣಾಮ, ಅವರ ಹಿಂಬದಿ ತಲೆಗೆ ಜಜ್ಜಿದ ರಕ್ತ ಗಾಯ, ನೆತ್ತಿಯ ಮೇಲೆ ಜಜ್ಜಿದ ರಕ್ತ ಗಾಯ, ಎಡ ಕೋಲು ಕೈಯಲ್ಲಿ ಸೀಳಿದ ರಕ್ತ ಗಾಯ, ಬಲ ಮತ್ತು ಎಡ ಕೋಲು ಕೈಯಲ್ಲಿ ಸೀಳಿದ ರಕ್ತಗಾಯ ಹಾಗೂ ಎರಡು ಕಾಲು ಮೊಣಗಂಟಿನಲ್ಲಿ ತರಚಿದ ಗಾಯಗಳಾಗಿದ್ದು, ಅವರನ್ನು ಬಂಟ್ವಾಳ ಸಾರ್ವಜನಿಕ ತಾಲೂಕು ಆಸ್ಪತ್ರೆಗೆ ಕರೆತಂದಾಗ ಅಲ್ಲಿನ ವೈದ್ಯರು ಪರೀಕ್ಷಿಸಿ ಸಾಗಿಸುವಾಗಲೇ ಮೃತಪಟ್ಟಿರುವುದಾಗಿ ತಿಳಿಸಿದ್ದು, ಸೇಸಮ್ಮರವರು ಮೃತಪಡಲು ಆರೋಪಿಯು ಕಾರಣಕರ್ತನಾಗಿದ್ದು, ಆ ಮೂಲಕ ಆರೋಪಿಯ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ-279, 304(ಎ) ರಡಿಯಲ್ಲಿ ಅಪರಾಧ ಎಸಗಿರುತ್ತಾರೆ ಎಂದು ಅಭಿಯೋಜನೆಯು ಸಂಶಯಾತೀತವಾಗಿ ರುಜುವಾತುಪಡಿಸಬೇಕಾಗುತ್ತದೆ.

12. ಪ್ರಸ್ತುತ ಪ್ರಕರಣದಲ್ಲಿ ಅಭಿಯೋಜನೆಯು ತಮ್ಮ ಪ್ರಕರಣವನ್ನು ರುಜುವಾತುಪಡಿಸಲು ಫಿರ್ಯಾದುದಾರರಾದ ಚಾಸಾ-1ರವರನ್ನು, ಪ್ರತ್ಯಕ್ಷ ಸಾಕ್ಷಿದಾರರಾದ ಚಾಸಾ-7 ರವರನ್ನು ಹಾಗೂ ಮಹಜರ್ ಸಾಕ್ಷಿದಾರರುಗಳಾದ ಚಾಸಾ-8 ಮತ್ತು ಚಾಸಾ-9 ರವರುಗಳನ್ನು

ಕ್ರಮವಾಗಿ ಪ್ರಾಸಾ-1 ರಿಂದ ಪ್ರಾಸಾ-4 ಎಂದು ವಿಚಾರಣೆಗೆ ಒಳಪಡಿಸಿರುತ್ತಾರೆ. ಪ್ರಾಸಾ-1ರವರು ಈ ಪ್ರಕರಣದ ಫಿರ್ಯಾದುದಾರರಾಗಿದ್ದು, ತಮ್ಮ ಮುಖ್ಯ ವಿಚಾರಣಾ ಸಾಕ್ಷ್ಯದಲ್ಲಿ, ಮೃತ ಸೇಸಮ್ಮ ತನ್ನ ಮನೆಯ ಹತ್ತಿರದವರು ಹಾಗೂ ಪರಿಚಯಸ್ಥರಾಗಿದ್ದು, ಆರೋಪಿಯನ್ನು ತಾನು ನೋಡಿರುವುದಿಲ್ಲ ಹಾಗೂ ಇದೇ ಮೊದಲ ಬಾರಿಗೆ ಆರೋಪಿಯನ್ನು ನೋಡುತ್ತಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಮುಂದುವರಿದು, ತನಗೆ ಈ ಪ್ರಕರಣದ ಬಗ್ಗೆ ಯಾವುದೇ ವಿಚಾರ ಗೊತ್ತಿಲ್ಲ ಹಾಗೂ ತಾನು ರಸ್ತೆಯಲ್ಲಿ ಹೋಗುತ್ತಿದ್ದಾಗ ಒಂದು ಅಪಘಾತ ಆಗಿತ್ತು. ಸದರಿ ಅಪಘಾತ ಯಾರ ತಪ್ಪಿನಿಂದ ಆಗಿದೆ ಎಂದು ತನಗೆ ಗೊತ್ತಿಲ್ಲ ಹಾಗೂ ತಾನು ಅಪಘಾತವನ್ನು ಕಣ್ಣಾರೆ ನೋಡಿರುವುದಿಲ್ಲ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಪ್ರಾಸಾ-1 ರವರು ದೂರನ್ನು ನಿಪಿ-1 ರಂತೆ ಹಾಗೂ ಅದರಲ್ಲಿರುವ ತನ್ನ ಸಹಿಯನ್ನು ನಿಪಿ1(ಎ) ರಂತೆ ಗುರುತಿಸಿದ್ದರೂ ಸಹ ಅದರಲ್ಲಿ ಬರೆದಿರುವ ಅಂಶಗಳನ್ನು ನಿರಾಕರಿಸಿರುತ್ತಾರೆ. ಮುಂದುವರಿದು, ನಿಪಿ-1ಕ್ಕೆ ತಾನು ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿರುವುದಾಗಿ ಹಾಗೂ ನಿ.ಪಿ-1ರಲ್ಲಿ ಬರೆದಿರುವ ವಿಚಾರಗಳು ತನಗೆ ಗೊತ್ತಿಲ್ಲ ಎಂದು ಹಾಗೂ ತಾನು ಪೊಲೀಸರಿಗೆ ಯಾವುದೇ ದೂರು ಕೊಟ್ಟಿರುವುದಿಲ್ಲ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಪ್ರಾಸಾ-1 ರವರು ನ್ಯಾಯಾಲಯದ ಮುಂದೆ ಹಾಜರುಪಡಿಸಿದ ಅಪಘಾತಕ್ಕೆ ಒಳಗಾದ ಕಾರಿನ ಭಾವಚಿತ್ರಗಳನ್ನು ನೋಡಿ ಗುರುತಿಸಿರುವುದಿಲ್ಲ.

13. ಪ್ರಾಸಾ-1 ರವರು ಅಭಿಯೋಜನೆಯ ಪ್ರಕರಣಕ್ಕೆ ವಿರುದ್ಧವಾಗಿ ಸಾಕ್ಷ್ಯ ನುಡಿದಿದ್ದು, ಆ ಕಾರಣದಿಂದ ಪ್ರಾಸಾ-1 ರವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ನ್ಯಾಯಾಲಯದ ಅನುಮತಿ ಪಡೆದು ಪಾಟೀ ಸವಾಲು ಮಾಡಿರುತ್ತಾರೆ. ಪಾಟೀ ಸವಾಲಿನಲ್ಲಿಯೂ ಕೂಡ ಪ್ರಾಸಾ-1 ರವರು ಆರೋಪಿಯ ವಿರುದ್ಧ ಮಾಡಲಾದ ಆರೋಪಗಳನ್ನು ಸಂಪೂರ್ಣವಾಗಿ ಅಲ್ಲಗಳೆದಿರುತ್ತಾರೆ ಮತ್ತು ನಿಪಿ-1 ಕ್ಕೆ ಸಂಬಂಧಿಸಿದ ವಿಷಯಗಳನ್ನು ನಿರಾಕರಿಸಿರುತ್ತಾರೆ. ಪ್ರಾಸಾ-1 ರವರ ಪಾಟೀ ಸವಾಲಿನಲ್ಲಿ

ಅಭಿಯೋಜನೆಯ ಪ್ರಕರಣವನ್ನು ಸಾಭಿತುಪಡಿಸುವ ಯಾವುದೇ ಸಾಕ್ಷ್ಯಗಳು ಒದಗಿಬಂದಿರುವುದಿಲ್ಲ.

14. ಆದೇ ರೀತಿ ಪ್ರಾಸಾ-2 ರವರು ಈ ಪ್ರಕರಣದ ಪ್ರಮುಖ ಹಾಗೂ ಪ್ರತ್ಯಕ್ಷ ಸಾಕ್ಷಿದಾರರಾಗಿದ್ದು, ತಮ್ಮ ಮುಖ್ಯ ವಿಚಾರಣಾ ಸಾಕ್ಷ್ಯದಲ್ಲಿ, ಆರೋಪಿಯನ್ನು ತಾನು ನೋಡಿರುವುದಿಲ್ಲ ಹಾಗೂ ತನಗೆ ಈ ಪ್ರಕರಣದ ಬಗ್ಗೆ ಯಾವುದೇ ವಿಚಾರ ಗೊತ್ತಿಲ್ಲ ಎಂದು ಸಾಕ್ಷ್ಯ ನುಡಿದಿದ್ದು, ತಾನು ಯಾವುದೇ ಅಪಘಾತವನ್ನು ನೋಡಿಲ್ಲ ಹಾಗೂ ಪೊಲೀಸರಿಗೆ ಯಾವುದೇ ಹೇಳಿಕೆಯನ್ನು ಕೊಟ್ಟಿರುವುದಿಲ್ಲ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಮುಂದುವರಿದು, ಪ್ರಾಸಾ-2ರವರು ನ್ಯಾಯಾಲಯದ ಮುಂದೆ ಹಾಜರುಪಡಿಸಿದ ಅಪಘಾತಕ್ಕೆ ಒಳಗಾದ ಕಾರಿನ ಭಾವಚಿತ್ರಗಳನ್ನು ನೋಡಿ ಗುರುತಿಸಿರುವುದಿಲ್ಲ.

15. ಪ್ರಾಸಾ-2 ರವರು ಅಭಿಯೋಜನೆಯ ಪ್ರಕರಣಕ್ಕೆ ವಿರುದ್ಧವಾಗಿ ಸಾಕ್ಷ್ಯ ನುಡಿದಿದ್ದು, ಆ ಕಾರಣದಿಂದ ಪ್ರಾಸಾ-2 ರವರನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ನ್ಯಾಯಾಲಯದ ಅನುಮತಿ ಪಡೆದು ಪಾಟೀ ಸವಾಲು ಮಾಡಿರುತ್ತಾರೆ. ಪಾಟೀ ಸವಾಲಿನಲ್ಲಿಯೂ ಕೂಡ ಪ್ರಾಸಾ-2 ರವರು ಆರೋಪಿಯ ವಿರುದ್ಧ ಮಾಡಲಾದ ಆರೋಪಗಳನ್ನು ಸಂಪೂರ್ಣವಾಗಿ ಅಲ್ಲಗಳೆದಿರುತ್ತಾರೆ. ಅಲ್ಲದೇ, ತಾನು ಪೊಲೀಸರ ಮುಂದೆ ನೀಡಿದ ಹೇಳಿಕೆಯನ್ನು ಸಂಪೂರ್ಣವಾಗಿ ಓದಿ ತಿಳಿಸಿದ್ದರೂ ಸಹ ಸಾಕ್ಷಿಯು ಅದನ್ನು ಅಲ್ಲಗಳೆದಿದ್ದು, ಅಲ್ಲಗಳೆದ ಹೇಳಿಕೆಯ ಭಾಗವನ್ನು ಕ್ರಮವಾಗಿ ನಿಪಿ-2 ರಂತೆ ಗುರುತಿಸಲಾಗಿರುತ್ತದೆ. ಪ್ರಾಸಾ-2 ರವರ ಪಾಟೀ ಸವಾಲಿನಲ್ಲಿ ಅಭಿಯೋಜನೆಯ ಪ್ರಕರಣವನ್ನು ಸಾಭಿತುಪಡಿಸುವ ಯಾವುದೇ ಸಾಕ್ಷ್ಯಗಳು ಒದಗಿಬಂದಿರುವುದಿಲ್ಲ.

16. ಆದೇ ರೀತಿ ಪ್ರಾಸಾ-3 ಮತ್ತು ಪ್ರಾಸಾ-4 ರವರು ಈ ಪ್ರಕರಣದ ಮಹಜರ್ ಸಾಕ್ಷಿದಾರರಾಗಿದ್ದು, ತಮ್ಮ ಮುಖ್ಯ ವಿಚಾರಣಾ ಸಾಕ್ಷ್ಯದಲ್ಲಿ, ಮಹಜರ್ ಮತ್ತು ಅಪಘಾತ ಸ್ಥಳದ ಕಚ್ಚಾ ನಕ್ಷೆಯನ್ನು ಹಾಗೂ ಅದರಲ್ಲಿರುವ ತಮ್ಮ ಸಹಿಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು

ಕ್ರಮವಾಗಿ ನಿಪಿ-3 ಮತ್ತು ನಿಪಿ-4 ರಂತೆ ನಿಶಾನೆಗಳಾನ್ನಾಗಿ ಗುರುತಿಸಲಾಗಿದ್ದು, ಸದರಿ ನಿಪಿ-3 ಮತ್ತು ನಿಪಿ-4ಕ್ಕೆ ತಾವು ಪೊಲೀಸ್ ಠಾಣೆಯಲ್ಲಿ ಸಹಿಗಳನ್ನು ಮಾಡಿರುತ್ತೇವೆ ಆದರೆ ಯಾವಾಗ ಎಂದು ನೆನಪಿರುವುದಿಲ್ಲ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಮುಂದುವರಿದು, ನಿಪಿ-3 ಮತ್ತು ನಿಪಿ-4 ರಲ್ಲಿ ಬರೆದಿರುವ ವಿಚಾರಗಳು ತಮಗೆ ಗೊತ್ತಿಲ್ಲ ಹಾಗೂ ತಮ್ಮ ಸಮಕ್ಷಮ ಪೋಲೀಸರು ಯಾವುದೇ ಮಹಜರು ಮತ್ತು ನಕ್ಷೆಯನ್ನು ತಯಾರಿಸಿರುವುದಿಲ್ಲ ಹಾಗೂ ತಮ್ಮ ಸಮಕ್ಷಮ ಪೋಲೀಸರು ಯಾವುದೇ ವಾಹನವನ್ನು ವಶಕ್ಕೆ ಪಡೆದುಕೊಂಡಿಲ್ಲ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಮುಂದುವರಿದು, ಪ್ರಾಸಾ-3 ಮತ್ತು ಪ್ರಾಸಾ-4 ರವರು ನ್ಯಾಯಾಲಯದ ಮುಂದೆ ಹಾಜರುಪಡಿಸಿರುವ ಅಪಘಾತಕ್ಕೆ ಒಳಗಾದ ಕಾರಿನ ಭಾವಚಿತ್ರಗಳನ್ನು ನೋಡಿ ಗುರುತಿಸಿರುವುದಿಲ್ಲ.

17. ಪ್ರಾಸಾ-3 ಮತ್ತು ಪ್ರಾಸಾ-4 ರವರು ಅಭಿಯೋಜನೆಯ ಪ್ರಕರಣಕ್ಕೆ ವಿರುದ್ಧವಾಗಿ ಸಾಕ್ಷ್ಯ ನುಡಿದಿದ್ದು, ಆ ಕಾರಣದಿಂದ ಪ್ರಾಸಾ-3 ಮತ್ತು ಪ್ರಾಸಾ-4 ರವರನ್ನು ಪ್ರತಿಕೂಲ ಸಾಕ್ಷ್ಯಿಗಳೆಂದು ಪರಿಗಣಿಸಿ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ನ್ಯಾಯಾಲಯದ ಅನುಮತಿ ಪಡೆದು ಪಾಟೀ ಸವಾಲು ಮಾಡಿರುತ್ತಾರೆ. ಪಾಟೀ ಸವಾಲಿನಲ್ಲಿಯೂ ಕೂಡ ಪ್ರಾಸಾ-3 ಮತ್ತು ಪ್ರಾಸಾ-4 ರವರು ಆರೋಪಿಯ ವಿರುದ್ಧ ಮಾಡಲಾದ ಆರೋಪಗಳನ್ನು ಸಂಪೂರ್ಣವಾಗಿ ಅಲ್ಲಗಳೆದಿರುತ್ತಾರೆ. ಅಲ್ಲದೇ, ಪ್ರಾಸಾ-3 ರವರು ಪೊಲೀಸರ ಮುಂದೆ ನೀಡಿದ ಹೇಳಿಕೆಯನ್ನು ಸಂಪೂರ್ಣವಾಗಿ ಓದಿ ತಿಳಿಸಿದ್ದರೂ ಸಹ ಪ್ರಾಸಾ-3ರವರು ಅದನ್ನು ಅಲ್ಲಗಳೆದಿದ್ದು, ಪ್ರಾಸಾ-3 ರವರು ಅಲ್ಲಗಳೆದ ಹೇಳಿಕೆಯ ಭಾಗವನ್ನು ನಿಪಿ-5 ರಂತೆ ಗುರುತಿಸಲಾಗಿರುತ್ತದೆ. ಪ್ರಾಸಾ-3 ಮತ್ತು ಪ್ರಾಸಾ-4 ರವರ ಪಾಟೀ ಸವಾಲಿನಲ್ಲಿ ಅಭಿಯೋಜನೆಯ ಪ್ರಕರಣವನ್ನು ಸಾಭಿತುಪಡಿಸುವ ಯಾವುದೇ ಸಾಕ್ಷ್ಯಗಳು ಒದಗಿಬಂದಿರುವುದಿಲ್ಲ.

18. ಪ್ರಸ್ತುತ ಪ್ರಕರಣದಲ್ಲಿ ಪ್ರಾಸಾ-1 ರಿಂದ ಪ್ರಾಸಾ-4 ರವರು ಪ್ರಮುಖ ಸಾಕ್ಷಿದಾರರಾಗಿದ್ದು ಹಾಗೂ ಅಭಿಯೋಜನೆಯು ಎಸಗಿರುವ ಆರೋಪಗಳ ಪ್ರಕಾರ ಬಲಿಪಶು ಆಗಿದ್ದು ಅಭಿಯೋಜನೆ ಪ್ರಕರಣಕ್ಕೆ ಪ್ರತಿಕೂಲ ಸಾಕ್ಷ್ಯ ನುಡಿದಿರುವುದರಿಂದ ಅಭಿಯೋಜನೆಯವರು ಉಳಿದ ಸಾಕ್ಷಿದಾರರಾದ ಚಾಸಾ-2 ರಿಂದ 6 ಹಾಗೂ ಚಾಸಾ-10 ರಿಂದ ಚಾಸಾ-16 ರವರ ಸಾಕ್ಷ್ಯ ವಿಚಾರಣೆಯನ್ನು ಮಾಡಿದರೂ ಸಹ ಅವರ ಸಾಕ್ಷ್ಯದ ಆಧಾರದ ಮೇಲೆ ಆರೋಪಿಯ ಆಪಾಧನೆಗಳನ್ನು ಸಾಭೀತುಪಡಿಸಲು ಸಾಧ್ಯವಾಗುವುದಿಲ್ಲ. ಆ ಕಾರಣದಿಂದ, ಪ್ರಕರಣವನ್ನು ಮುಂದುವರಿಸುವ ಅವಶ್ಯಕತೆ ಕಂಡು ಬರುವುದಿಲ್ಲ. ಪ್ರಸ್ತುತ ಪ್ರಕರಣದ ಫಿರ್ಯಾದುದಾರರಾದ ಪ್ರಾಸಾ-1 ಹಾಗೂ ಪ್ರತ್ಯಕ್ಷ ಸಾಕ್ಷಿದಾರರಾದ ಪ್ರಾಸಾ-2 ಹಾಗೂ ಮಹಜರ್ ಸಾಕ್ಷಿದಾರರಾದ ಪ್ರಾಸಾ-3 ಮತ್ತು ಪ್ರಾಸಾ-4 ರವರೇ ಪ್ರತಿಕೂಲ ಸಾಕ್ಷ್ಯ ನುಡಿದಿರುವುದರಿಂದ ಮಾನ್ಯ ಅಭಿಯೋಜಕರ ಕೋರಿಕೆಯನ್ನು ತಳ್ಳಿ ಹಾಕಿ ಬಾಕಿ ಉಳಿದ ಸಾಕ್ಷಿದಾರರ ಸಾಕ್ಷ್ಯ ವಿಚಾರಣೆಯನ್ನು ಕೈ ಬಿಡಲಾಗಿರುತ್ತದೆ. ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯವು **LAWS(SC)-1996-7-136 (Satish Mehra V/S Delhi Administration and others)** ಎಂದು ವರದಿಯಾಗಿರುವ ಪ್ರಕರಣದಲ್ಲಿ ಈ ಕೆಳಗಿನಂತೆ ತೀರ್ಪು ನೀಡಿರುತ್ತದೆ ***"In cases where there is no prospect of the case ending in conviction, the valuable time of the court should not be wasted for holding a trial only for the purpose of the formally completing the procedure to pronounce the conclusion on a future date".***

19. ಪ್ರಸ್ತುತ ಪ್ರಕರಣದಲ್ಲಿ ಫಿರ್ಯಾದುದಾರರಾದ ಪ್ರಾಸಾ-1 ಹಾಗೂ ಪ್ರತ್ಯಕ್ಷ ಸಾಕ್ಷಿದಾರರಾದ ಪ್ರಾಸಾ-2 ಹಾಗೂ ಮಹಜರ್ ಸಾಕ್ಷಿದಾರರಾದ ಪ್ರಾಸಾ-3 ಮತ್ತು ಪ್ರಾಸಾ-4 ರವರು ಪ್ರತಿಕೂಲ ಸಾಕ್ಷ್ಯ ನುಡಿದಿರುವುದರಿಂದ ಇವರ ಸಾಕ್ಷ್ಯ ಅಭಿಯೋಜನೆಯ ಪ್ರಕರಣಕ್ಕೆ ಸಹಾಯಕವಾಗುವಂತಹ ಸಾಕ್ಷ್ಯವಾಗುವುದಿಲ್ಲ ಮತ್ತು ಆರೋಪಿಯ ಆಪಾಧನೆಗಳನ್ನು ಸಾಭೀತುಪಡಿಸಲು ಸಾಧ್ಯವಾಗುವಂತಹ ಯಾವುದೇ

ವಿರುದ್ಧಾತ್ಮಕ ಹೇಳಿಕೆಗಳು ಪ್ರಾಸಾ-1 ರಿಂದ ಪ್ರಾಸಾ-4 ರವರ ಸಾಕ್ಷ್ಯದಲ್ಲಿ ಕಂಡುಬರುವುದಿಲ್ಲ. ಅಲ್ಲದೇ ಪ್ರಸ್ತುತ ಪ್ರಕರಣದಲ್ಲಿ ಅಭಿಯೋಜನೆಯವರು ಸಾದರಪಡಿಸಿರುವ ಪುರಾವೆಗಳನ್ನು ಪರಿಶೀಲಿಸಿದಾಗ ಮೃತ ವ್ಯಕ್ತಿ- ಸೇಸಮ್ಮರವರು ಅಪಘಾತದಿಂದ ಮೃತ ಪಟ್ಟಿರುತ್ತಾರೆ ಎಂಬುದರ ಬಗ್ಗೆ ಯಾವುದೇ ವಿವಾದವಿಲ್ಲ. ಆದರೆ ಅಭಿಯಾೀಜನೆಯವರು ಒದಗಿಸಿರುವ ಮೌಖಿಕ ಮತ್ತು ದಸ್ತಾವೇಜು ಪುರಾವೆಗಳನ್ನು ಅಂದರೆ ನಿಪಿ-1 ರಿಂದ 8 ಹಾಗೂ ಪ್ರಾಸಾ-1 ರಿಂದ ಪ್ರಾಸಾ-4 ರವರ ಸಾಕ್ಷ್ಯವನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ ಆರೋಪಿಯು ತನ್ನ ಬಾಬ್ತು ಕಾರ್ ಸಂಖ್ಯೆಃಕೆಎ-70-ಎಂ-4189 ನ್ನು ದುಡುಕುತನ ಮತ್ತು ಅಜಾಗರೂಕತೆಯಿಂದ ಚಲಾಯಿಸಿರುತ್ತಾರೆ ಎಂದು ಅಭಿಯೋೀಜನೆಯು ಸಂಶಯಾತೀತವಾಗಿ ರುಜುವಾತುಪಡಿಸುವಲ್ಲಿ ವಿಫಲವಾಗಿದ್ದಾರೆ ಎಂದೇ ಹೇಳಬೇಕಾಗುತ್ತದೆ.

20. ಭಾರತೀಯ ದಂಡ ಸಂಹಿತೆ ಕಲಂ 304(ಎ) ಶೀರ್ಷಿಕೆಯೇ ಹೇಳುವಂತೆ ನಿರ್ಲಕ್ಷ್ಯದಿಂದ ಮಾಡಿದ ಕೃತ್ಯದಿಂದಾಗಿ ವ್ಯಕ್ತಿಯ ಮರಣವನ್ನುಂಟು ಮಾಡಿದರೆ ಈ ಕಲಂಮಿನಂತೆ ದಂಡನೀಯವಾದ ಅಪರಾಧವಾಗುತ್ತದೆ. ಈ ಕಲಂನ ವ್ಯಾಪ್ತಿಯಲ್ಲಿ ಬರಬೇಕಾದರೆ ಯಾವುದೇ ವ್ಯಕ್ತಿಯ ಮರಣವುಂಟಾಗಿರತಕ್ಕದು ಮತ್ತು ಮರಣವನ್ನುಂಟು ಮಾಡುವ ಉದ್ದೇಶವಿಲ್ಲದೆ ಮಾಡಿದ ಕೃತ್ಯವು ಆದಾಗಿರತಕ್ಕದು ಅಥವಾ ತಾನು ಮಾಡುವ ಕೃತ್ಯವು ಎಲ್ಲಾ ಸಂದರ್ಭಗಳಲ್ಲಿಯೂ ಮರಣವನ್ನುಂಟು ಮಾಡುತ್ತದೆ ಎಂಬ ತಿಳುವಳಿಕೆ ಇಲ್ಲದೆ ಮಾಡಿದ ಕೃತ್ಯವು ಅದಾಗಿರತಕ್ಕುದು. ಒಟ್ಟಿನಲ್ಲಿ ಉದ್ದೇಶ ರಹಿತವಾದ ಕೃತ್ಯವು ಮತ್ತು ನಿರ್ಲಕ್ಷ್ಯದಿಂದ ಮಾಡಿದ ಕೃತ್ಯವು ಅದಾಗಿರತಕ್ಕುದು. ಆಗ ಮಾತ್ರವೇ ಈ ಕಲಂ ಅನ್ವಯವಾಗುತ್ತದೆ. ಅಂತಹ ವ್ಯಕ್ತಿಯ ಮರಣವು ಅಪಾದಿತನ ಕೃತ್ಯದಿಂದಲೇ ಉಂಟಾಗಿರತಕ್ಕದ್ದು ಅದು ನೇರ ಕಾರಣವಾಗಿರಬೇಕು ಅಥವಾ ಅತೀ ಸಮೀಪದ ಕಾರಣವಂತೂ ಆಗಿರಲೇಬೇಕು. ಮರಣಕ್ಕೂ ಅಪಾದಿತನ

ಕೃತ್ಯಕ್ಕೂ ಕಲ್ಪನೆ ಮಾಡಿ ಸಂಬಂಧ ಕಲ್ಪಿಸುವಂತಿರಬಾರದು ಹಾಗೂ ವ್ಯಕ್ತಿಯ ಮರಣವು ಆಪಾದಿತನ ದುಡುಕಿನ ಅಥವಾ ನಿರ್ಲಕ್ಷ್ಯದ ಕೃತ್ಯದ ನೇರ ಪರಿಣಾಮವು ಆಗಿರತಕ್ಕದ್ದು ಮತ್ತು ಅದು ಮತ್ತೊಬ್ಬ ಯಾವನೇ ವ್ಯಕ್ತಿಯ ನಿರ್ಲಕ್ಷ್ಯವು ಮಧ್ಯ ಪ್ರವೇಶಿಸಿರದಂಥ ಮರಣದ ಅತೀಸಮೀಪದ ಮತ್ತು ಸಮರ್ಥನೀಯ ಕೃತ್ಯವಾಗಿರತಕ್ಕುದು .

21. ಅಪರಾಧಿಕ ಕಾನೂನು ತತ್ವದ ಪ್ರಕಾರ ಕ್ರಿಮಿನಲ್ ಪ್ರಕರಣದಲ್ಲಿ ತನ್ನ ಪ್ರಕರಣವನ್ನು ವಿಚಾರಣಾ ಹಂತದಲ್ಲಿ ರುಜುವಾತುಪಡಿಸುವ ಹೊಣೆಗಾರಿಕೆ ಅಭಿಯೋಜನೆಯ ಮೇಲಿರುತ್ತದೆಯೆ ಹೊರತು ಆರೋಪಿಯ ಮೇಲಿರುವುದಿಲ್ಲ. ಒಂದು ವೇಳೆ ಅಭಿಯೋಜನೆಯವರು ತಮ್ಮ ಪ್ರಕರಣವನ್ನು ಸಂಶಯಾತೀತವಾಗಿ ರುಜುವಾತುಪಡಿಸಲು ವಿಫಲವಾದರೆ ಅಂತಹ ಸಂಶಯದ ಲಾಭವು ಖಂಡಿತವಾಗಿಯು ಆರೋಪಿಯ ಪರವಾಗಿರತಕ್ಕದ್ದು. ಅಂತಹ ಸಂದರ್ಭದಲ್ಲಿ ಆರೋಪಿಯನ್ನು ನಿರ್ದೋಷಿ ಎಂದೇ ಪರಿಗಣಿಸಬೇಕಾಗುತ್ತದೆ .

22. ಈ ಮೇಲೆ ಚರ್ಚಿಸಿದಂತೆ ಪ್ರಾಸಾ -1 ರಿಂದ ಪ್ರಾಸಾ-4 ರವರ ಮೌಖಿಕ ಸಾಕ್ಷ್ಯವನ್ನು ಮತ್ತು ನಿಪಿ-1 ರಿಂದ ನಿಪಿ-8 ದಾಖಲೆಗಳನ್ನು ಕೂಲಂಕುಶವಾಗಿ ಪರಿಶೀಲಿಸಿದಾಗ ಆರೋಪಿಯ ವಿರುದ್ಧ ಆಪಾದಿಸಲಾದ ಆಪಾದನೆಗೆ ಸಂಬಂಧಿಸಿದಂತೆ ಯಾವುದೇ ಘಟಕಾಂಶಗಳನ್ನು ರುಜುವಾತುಪಡಿಸಲು ಅಭಿಯೋಜನೆಯು ವಿಫಲವಾಗಿದೆ ಎಂದೇ ಹೇಳಬೇಕಾಗುತ್ತದೆ ಮತ್ತು ಅಭಿಯೋಜನೆಯು ಸಾದರಪಡಿಸಿರುವ ಸಾಕ್ಷ್ಯಾದಾರಗಳಿಂದ ಆರೋಪಿಯ ಮೇಲಿನ ಆಪಾಧನೆಗಳನ್ನು ಸಾಭೀತು ಮಾಡಲು ಸಾಧ್ಯವಿಲ್ಲ. ಆದಕಾರಣ ಆರೋಪಿಗೆ ಅನುಮಾನದ ಲಾಭವನ್ನು ನೀಡುತ್ತಾ, ಈ ನ್ಯಾಯಾಲಯವು ಅಂಶ- 1 ಮತ್ತು 2 ನ್ನು “ನಕಾರಾತ್ಮಕವಾಗಿ ” ಉತ್ತರಿಸಿದೆ .

23. <u>ಅಂಶ -**3**</u>: ಮೇಲ್ಕಂಡ ಅಂಶ 1 ಮತ್ತು 2 ಇವುಗಳ ಚರ್ಚೆಯ ಅಧಾರದ ಮೇಲೆ ಈ ಕೆಳಗಿನಂತೆ:

# ಆದೇಶ

ದಂಡ ಪ್ರಕ್ರಿಯಾ ಸಂಹಿತೆ ಕಲಂ 255(1) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಭಾರತೀಯ ದಂಡ ಸಂಹಿತೆ ಕಲಂ- 279 ಮತ್ತು 304(ಎ) ರಡಿಯಲ್ಲಿ ಆಪಾದಿಸಲಾದ ಆಪಾದನೆಗಳಿಂದ ಆರೋಪಿಯನ್ನು ದೋಷಮುಕ್ತಗೊಳಿಸಿ ಖುಲಾಸೆಗೊಳಿಸಲಾಗಿದೆ.

ಆರೋಪಿ ಪರ ಬರೆದು ಕೊಟ್ಟಿರುವ ಜಾಮೀನು ಮುಚ್ಚಳಿಕೆಯು 6 ತಿಂಗಳ ಕಾಲ ಮುಂದುವರಿಯುವುದು. ಸದರಿ ಅವಧಿಯಲ್ಲಿ ಮೇಲ್ಮನವಿ ಪ್ರಾಧಿಕಾರದಿಂದ ಯಾವುದೇ ಸೂಚನೆ ಬರದೆ ಇದ್ದಲ್ಲಿ ಸದರಿ ಜಾಮೀನು ಮುಚ್ಚಳಿಕೆಯು ಸ್ವಯಂ ಚಾಲಿತವಾಗಿ ರದ್ದಾಗತಕ್ಕದ್ದು.

(ತೀರ್ಪನ್ನು ಶೀಘ್ರಲಿಪಿಗಾರರ ಮೂಲಕ ಬೆರಳಚ್ಚು ಮಾಡಿಸಿದ್ದು ನಂತರ ಅದನ್ನು ಓದಿ ತಿದ್ದಿ ಪರಿಷ್ಕರಿಸಿ ಈ ದಿನ ಅಂದರೆ ದಿನಾಂಕ: **24.07.2025** ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು.)

( ರಾಜೇಂದ್ರ ಪ್ರಸಾದ್ ಕೆ.ಎಸ್. )<br>
ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು<br>
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,ಬಂಟ್ವಾಳ

## : ಅ ನು ಬಂ ಧ :

**01.** ಅಭಿಯೋಜನೆಯ ಪರವಾಗಿ ವಿಚಾರಣೆಯಾದ ಸಾಕ್ಷಿಗಳ ಪಟ್ಟಿ :

ಪ್ರಾಸಾ-1/ಚಾಸಾ-1 : ಶ್ರೀ.ಉಮೇಶ್<br>
ಪ್ರಾಸಾ-2/ಚಾಸಾ-7 : ಶ್ರೀ. ಪುನೀತ್<br>
ಪ್ರಾಸಾ-3/ಚಾಸಾ-8 : ಶ್ರೀ. ಯೋಗೇಶ್<br>
ಪ್ರಾಸಾ-4/ಚಾಸಾ-9 : ಶ್ರೀ. ಶಿವಪ್ರಸಾದ್

**02.** ಆರೋಪಿ ಪರವಾಗಿ ವಿಚಾರಣೆಯಾದ ಸಾಕ್ಷಿಗಳ ಪಟ್ಟಿ **:**

---- ಇಲ್ಲ ------

**03.** ಅಭಿಯೋಜನೆಯ ಪರವಾಗಿ ಹಾಜರುಪಡಿಸಿದ ದಸ್ತಾವೇಜುಗಳ ಪಟ್ಟಿ **:**

ನಿಪಿ-1 : ದೂರು,
ನಿಪಿ-1(ಎ) : ಪ್ರಾಸಾ-1 ರವರ ಸಹಿ,
ನಿಪಿ-2 : ಪ್ರಾಸಾ-2 ರವರು ಅಲ್ಲಗಳೆದ ಹೇಳಿಕೆ ಭಾಗ,
ನಿಪಿ-3 : ತಕ್ಶೀರು ಸ್ಥಳ ಮಹಜರ್ ,
ನಿಪಿ-3(ಎ) : ಪ್ರಾಸಾ-3 ರವರ ಸಹಿ,
ನಿಪಿ-3(ಬಿ) : ಪ್ರಾಸಾ-4 ರವರ ಸಹಿ,
ನಿಪಿ-4 : ನಕ್ಷೆ
ನಿಪಿ-4(ಎ) : ಪ್ರಾಸಾ-3 ರವರ ಸಹಿ,
ನಿಪಿ-4(ಬಿ) : ಪ್ರಾಸಾ-4 ರವರ ಸಹಿ,
ನಿಪಿ-5 : ಪ್ರಾಸಾ-3 ರವರು ಅಲ್ಲಗಳೆದ ಹೇಳಿಕೆ ಭಾಗ,
ನಿಪಿ-6 : ವಾಹನ ನಿರೀಕ್ಷಣಾ ವರದಿ
ನಿಪಿ-7 : ಶವ ಪರೀಕ್ಷೆ ವರದಿ
ನಿಪಿ-8 : ಶವ ಪಂಚನಾಮೆ

**04.** ಆರೋಪಿ ಪರವಾಗಿ ಹಾಜರುಪಡಿಸಿದ ದಸ್ತಾವೇಜುಗಳ ಪಟ್ಟಿ **:**

---- ಇಲ್ಲ ------

**05.** ಅಭಿಯೋಜನೆಯ ಪರವಾಗಿ ಗುರುತಿಸಲ್ಪಟ್ಟ ಮುದ್ದೆಮಾಲುಗಳ ಪಟ್ಟಿ **:**

---- ಇಲ್ಲ ------

( ರಾಜೇಂದ್ರ ಪ್ರಸಾದ್ ಕೆ.ಎಸ್. )
ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಬಂಟ್ವಾಳ.

KAGALAVADI
SANNAMADAIAH
RAJENDRAPRASAD

Digitally signed by
KAGALAVADI
SANNAMADAIAH
RAJENDRAPRASAD
Date: 2025.07.24
17:11:27 +0530